*ಓ.ಎಸ್.ನಂ.114-15*
*ಪಿ.ಡಬ್ಲ್ಯೂ-1.*

***ದಿಃ 12-06-2018 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.***

***ಪಾಟೀಸವಾಲುಃ ಪ್ರತಿವಾದಿ ಪರ ವಕೀಲರಿಂದ.***

ನಾನು ವಿಧ್ಯಾಭ್ಯಾಸ ಮಾಡಿಲ್ಲ. ನನಗೆ ಆಂಗ್ಲ ಭಾಷೆ ಓದಲು ಮತ್ತು ಬರೆಯಲು ಬರುವುದಿಲ್ಲ ಆದರೆ ಆಂಗ್ಲ ಭಾಷೆಯಲ್ಲಿ ಸಹಿ ಮಾಡುತ್ತೇನೆ. ದಾವಾ ಸರ್ವೆ.ನಂ ಕುರಿತು ನನಗೆ ಮಾಹಿತಿ ಇದೆ. ನಾನು ವಾದ ಪತ್ರದಲ್ಲಿ ದಾವಾ ಸರ್ವೆನಂ ಗೆ ಚಕ್ಕುಬಂಧಿಯನ್ನು ನಾನು ಖರೀದಿಸಿದ ಕ್ರಯಪತ್ರದ ಆಧಾರದ ಮೇರೆಗೆ ನೀಡಿರುತ್ತೇನೆ. ನನಗೆ *4* ದಿಕ್ಕುಗಳಿಗೆ ಇರುವ ಸರ್ವೆನಂ ಗಳ ಕುರಿತು ಮಾಹಿತಿ ಇದೆ. ನನ್ನ ಕ್ರಯಪತ್ರದಲ್ಲಿ ಸರ್ವೆನಂ ನಮೂದಿಸಿಲ್ಲ ಎಂದರೆ ಸಾಕ್ಷಿ ನಾವು ಸರ್ವೆ ನಂ ಅನ್ನು ನಮೂದಿಸುವುದಿಲ್ಲ ಎಂದು ಬದಲಾಗಿ ಅನುಭವದಾರರ ಹೆಸರನ್ನು ನಮೂದಿಸುತ್ತೇವೆ ಎಂದು ಸಾಕ್ಷ್ಯ ನುಡಿಯುತ್ತಾರೆ. ನಿ.ಪಿ-*1* ಮತ್ತು *2* ರ ಮೂಲ ಪ್ರತಿಗಳನ್ನು ಬ್ಯಾಂಕಿನಲ್ಲಿ ಆಧಾರ ಮಾಡಿ ಸಾಲ ಪಡೆದಿರುತ್ತೇವೆ. ಬ್ಯಾಂಕಿನಲ್ಲಿ ಆಧಾರ ಮಾಡಿರುವ ಕುರಿತು ನನ್ನಲ್ಲಿ ದಾಖಲಾತಿಗಳು ಇದ್ದು ಸದರಿ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇನೆ. ನನ್ನ ವಾದ ಪತ್ರದಲ್ಲಿ ಮತ್ತು ಕ್ರಯಪತ್ರದಲ್ಲಿ ನಮೂದಿಸಿರುವ ಚಕ್ಕುಬಂಧಿ ಸರಿ ಇಲ್ಲ ಎಂದರೆ ಸರಿಯಲ್ಲ.

*2.* ದಾವಾ ಸರ್ವೆನಂ *43* ರಾಮರಾವ್ ರವರಿಗೆ ಮಂಜೂರಾತಿ ಆಗಿರುವ ಕುರಿತು ನಾನು ನ್ಯಾಯಾಲಯಕ್ಕೆ ದಾಖಲಾತಿಯನ್ನು ಹಾಜರುಪಡಿಸುತ್ತೇನೆ. ದಾವಾ ಸರ್ವೆನಂ *43* ರಾಮರಾವ್ ಎಂಬುವವರಿಗೆ ಮಂಜೂರು ಆಗಿಲ್ಲ ಎಂದರೆ ಸರಿಯಲ್ಲ. ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ದಾಖಲಾತಿಗಳ ಕುರಿತು ನನಗೆ ಗೊತ್ತಿಲ್ಲ. ಸರ್ವೆನಂ *43* ರಲ್ಲಿ ಒಟ್ಟು *31* ಎಕರೆ, *17* ಗುಂಟೆ ಜಮೀನು ಇದ್ದು ಅದರಲ್ಲಿ *21* ಗುಂಟೆ ಖರಾಬು ಇರುತ್ತದೆ ಎಂದರೆ ಸರಿ. ಸರ್ವೆನಂ *43* ರಲ್ಲಿನ ಪೋಡುಗಳು ರದ್ದಾಗಿರುತ್ತವೆ. ಸದರಿ ದುರಸ್ತನ್ನು ರದ್ದುಪಡಿಸುವಂತೆ ನಾನೇ ಅರ್ಜಿಯನ್ನು ಸಲ್ಲಿಸಿದ್ದೆನು. ನಾನು ಸಲ್ಲಿಸಿದ್ದ ಮೇಲ್ಮನವಿಯಲ್ಲಿ *43/4* ಮತ್ತು *43/5* ನ್ನು ಹೊರತುಪಡಿಸಿ ಇತರೆ ಎಲ್ಲಾ ಪೋಡುಗಳು ರದ್ದಾಗಿರುತ್ತವೆ ಎಂದರೆ ಸಾಕ್ಷಿ *43/1* ರಿಂದ *43/7* ರವರೆಗೆ ರದ್ದಾಗಿರುತ್ತವೆ ಎಂದು ಸಾಕ್ಷ್ಯ ನುಡಿಯುತ್ತಾರೆ. ನಾನು ಸದರಿ ಡಿ.ಡಿ.ಎಲ್.ಆರ್. ಮೇಲ್ಮನವಿ ಆದೇಶವನ್ನು ಹಾಜರುಪಡಿಸುತ್ತೇನೆ.

***3.*** ರಾಮರಾವ್ ರವರ ಮಗನಾದ ಪ್ರಸನ್ನ ರವರಿಗೆ ವಾದ ಪತ್ರದಲ್ಲಿ ನಮೂದಿಸಿರುವ ಸ್ವತ್ತು ಚಕ್ಕುಬಂಧಿಯಂತೆ ಬಂದಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ರಾಮರಾವ್ ಮತ್ತು ಆತನ ಮಗನಾದ ಪ್ರಸನ್ನ ರವರಿಗೆ ವಾದ ಪತ್ರದಲ್ಲಿ ನಮೂದಿಸಿರುವ ಚಕ್ಕುಬಂಧಿಯಂತೆ ಸ್ವತ್ತು ಇರಲಿಲ್ಲ ಎಂದರೆ ಸರಿಯಲ್ಲ. ಆರ್.ಪ್ರಸನ್ನ ಬಿನ್ ರಾಮರಾವ್ ರವರು ನಾರಾಯಣರಾವ್ ಬಿನ್ ತುಕರಾಮ್ ರಾವ್ ರವರಿಗೆ ಸ್ವತ್ತನ್ನು ಹಸ್ತಾಂತರಿಸಿದ ಪತ್ರವಾದ ನಿ.ಪಿ-***3*** ರಲ್ಲಿ ಆರ್.ಪ್ರಸನ್ನ ಬಿನ್ ರಾಮಾರಾವ್ ರವರಿಗೆ ಸ್ವತ್ತು ಯಾವ ರೀತಿಯಾಗಿ ಬಂದಿದೆ ಎಂದು ಉಲ್ಲೇಖ ಇಲ್ಲ ಎಂದರೆ ಸಾಕ್ಷಿ ನಾರಾಯಣರಾವ್ ಎಂಬುವವರು ಇಲ್ಲ ಎಂದು ಸಾಕ್ಷ್ಯ ನುಡಿಯುತ್ತಾರೆ. ನಿ.ಪಿ.***3*** ರಲ್ಲಿ ರಾಮರಾವ್ ರವರಿಗೆ ಸರ್ಕಾರದಿಂದ ಜಮೀನು ಮಂಜೂರಾಗಿರುವ ಕುರಿತು ಉಲ್ಲೇಖ ಇಲ್ಲ ಎಂದರೆ ಸಾಕ್ಷಿ ರಾಮರಾವ್ ರವರಿಗೆ ಸರ್ಕಾರದಿಂದ ಜಮೀನು ಮಂಜೂರಾಗಿಲ್ಲ ಎಂದು ಸಾಕ್ಷ್ಯ ನುಡಿಯುತ್ತಾರೆ. ರಾಮರಾವ್ ರವರಿಗೆ ದಾವಾ ಸರ್ವೆನಂ ಸ್ವತ್ತು ಸರ್ಕಾರದಿಂದ ಮಂಜೂರಾಗಿದೆ ಎಂದು ನನ್ನ ವಾದ ಪತ್ರದಲ್ಲಿ ಬರೆಸಿಲ್ಲ.

***4.*** ನಾರಾಯಣರಾವ್ ಬಿನ್ ತುಕರಾಮರಾವ್ ರವರ ಮಾರಾಟಗಾರರಿಗೆ ಯಾವ ರೀತಿ ಸ್ವತ್ತು ಬಂದಿರುತ್ತದೆ ಎಂದು ನಾನು ದಾಖಲಾತಿಯನ್ನು ನೋಡಿರುತ್ತೇನೆ. ನಾನು ಸದರಿ ದಾಖಲಾತಿಗಳನ್ನು ನೋಡದ ಕಾರಣ ಸರ್ವೆನಂ. ***43*** ರ ಕುರಿತು ನನಗೆ ಸಂಪೂರ್ಣ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನಾನು ವಾದ ಪತ್ರದಲ್ಲಿ ನಮೂದಿಸಿರುವ ಚಕ್ಕುಬಂಧಿಗೆ ಒಳಪಟ್ಟ ಜಮೀನು ರಾಮರಾವ್ ರವರಿಗೆ ಬಂದಿರುವುದಿಲ್ಲ ಎಂದರೆ ಸರಿಯಲ್ಲ. ನಾರಾಯಣರಾವ್ ಬಿನ್ ತುಕರಾಮರಾವ್ ರವರಿಗೆ ದಾವಾ ಸರ್ವೆನಂ ಸ್ವತ್ತನ್ನು ಹಸ್ತಾಂತರಿಸಲು ಯಾವುದೇ ಪ್ರಾಧೀಕೃತ ಹಕ್ಕು ಇರಲಿಲ್ಲ ಹಾಗಾಗಿ ಅವರು ನನಗೆ ಕಾನೂನಿನ ಅಡಿಯಲ್ಲಿ ಹಕ್ಕನ್ನು ನೀಡಿಲ್ಲ ಎಂದರೆ ಸರಿಯಲ್ಲ. ದಿಃ***22-01-2016*** ರಂದು ಡಿ.ಡಿ.ಎಲ್.ಆರ್. ಪ್ರಾಧಿಕಾರದವರು ಆದೇಶಿಸುವ ಪೂರ್ವದಲ್ಲಿ ಅಳತೆ ಕಾರ್ಯ ಮಾಡಿದ್ದರು. ಸದರಿ ಪ್ರಕರಣದಲ್ಲಿ ಪ್ರತಿವಾದಿ ಕೂಡ ಪಕ್ಷಗಾರರಾಗಿರುತ್ತಾರೆ. ನನ್ನ ಮತ್ತು ನನ್ನ ಪತ್ನಿಯ ಹೆಸರಿಗೆ ನಮೂದಾಗಿದ್ದ ದುರಸ್ತನ್ನು ಸದರಿ ಪ್ರಾಧಿಕಾರದವರು ರದ್ದುಪಡಿಸಿರುತ್ತಾರೆ. ದಾವೆಯನ್ನು ಸಲ್ಲಿಸುವ ಕಾಲಕ್ಕೆ ನಮಗೆ ಸೇರಿದ ಜಮೀನು ***43/02*** ಹಾಗೂ ***3*** ಎಂದು ಇತ್ತು. ನನ್ನ ವಾದ ಪತ್ರದಲ್ಲಿ ಸರ್ವೆ ನಂ ***43/2*** ಹಾಗೂ ***3*** ಎಂದು ಬರೆಸಿಲ್ಲ ಎಂದರೆ ಸರಿಯಲ್ಲ. ನನ್ನ ವಾದ ಪತ್ರದಲ್ಲಿ ಸರ್ವೆ ***43/2***

ಮತ್ತು *3* ಎಂದು ಬರೆಸದಿದ್ದರೂ ಕೂಡ ಬರೆಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀಸವಾಲಿಗಾಗಿ ಸಮಯಾವಕಾಶ ನೀಡಲಾಯಿತು.**

*(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)*

*ಓ. ಕೇ. ಸ. ಇ. ಎ. ಒ.*

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂ. ರವರು, ತರೀಕೆರೆ.**